ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Friday, 18th April, 1975/Chaitra 28, 1897 S.E.

The House met in the Assembly Chamber, Vidhana Soudha, at Thirty Minutes past Eight of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Allotment of Sites by C.I.T.B.

206. SRI T. R. SHAMANNA (Fort)—

Will the Minister for Law and Municipal Administration be pleased to state:—

(*a*) the number of stray sites allotted by the City Improvement Trust Board during the years 1971-72, 1972-73, 1973-74, 1974-75 upto-date;

(*b*) the number of private layout formations sanctioned by the City Improvement Trust Board during the years referred to in clause (*a*);

(*c*) the number of sites applied for by the public during last 4 years and number of persons to whom sites have been allotted (1) Building sites (2) Industrial sites;

(*d*) the number of sites allotted to revenue site owners during the last 4 years;

(*e*) the number of persons who have given applications with deposit for allotment of sites behind Sri Ramakrishna Mutt (in Division 30) and of them, the number who have been given sites?

SRI D. K. NAIKAR (Minister for Law and Municipal Administration).—

(a)	*1971-72*	*1972-73*	*1973-74*	*1974-75*
	842	580	1,148	1,866
(b)	12	23	17	9

(c)	No. of persons applied		No. of sites allotted
	(1) 18,360		3,080
	(2) 54		51

(d)	*1971-72*	*1972-73*	*1973-74*	*1974-75*
	7	4	158	1,367

(e)	Applied	No. of sites allotted	
	320	68	

SRI T. R. SHAMANNA.— Out of 18,360 persons applied for sites only 3080 sites have been allotted. The number of applications is more than the sites allotted. The total number of stray sites allotted is 4436. ಹೀಗೆ ಇದರಲ್ಲಿ ಒಂದಕ್ಕೊಂದು ವ್ಯತ್ಯಾಸಗಳು ಅಂಕೆಗಳಲ್ಲಿ ಕಂಡುಬರುತ್ತವೆ. ಇದಕ್ಕೆ ಕಾರಣಗಳೇನು?

† ಶ್ರೀ ಡಿ. ಕೆ. ನಾಯಕರ್.— (ಎ) ಪ್ರಶ್ನೆಯಲ್ಲಿ ಕೇಳಿರುವುದು, ಸ್ಟೇ ಸೈಟುಗಳನ್ನು ಅಲಾಟು ಮಾಡಿರುವುದರ ಬಗೆ ಮಾಹಿತಿ. ಇದನ್ನು ಕೊಡಲಾಗಿದೆ. (ಸಿ) ಪ್ರಶ್ನೆಯಲ್ಲಿ ಯಾರ್ಯಾರು ಸೈಟುಗಳಿಗಾಗಿ ಅಪ್ಲೈ ಮಾಡಿದ್ದರು ಅವರುಗಳ ವಿವರಗಳನ್ನು ಕೊಡಬೇಕೆಂದು ಇದೆ. ಆದುದರಿಂದ ಇಲ್ಲಿ ಕೊಟ್ಟಿರುವ ಅಂಕೆ ಅಂಶಗಳು ಹೊಂದಾಣಿಕೆಯಾಗುತ್ತದೆ.

ಶ್ರೀ ಟಿ. ಆರ್. ಶಾಮಣ್ಣ.— ಸೈಟುಗಳನ್ನು ವಿತರಣೆ ಮಾಡುವಾಗ ಕೆಲವು ಕಡೆಗಳಲ್ಲಿ ಸೊಸೈಟಿಗಳಿಗೆ ಬೇಕಾದ ಹಾಗೆ ಸೈಟುಗಳನ್ನು ವಿತರಣೆ ಮಾಡಿದ್ದಾರೆ. ಇದರಲ್ಲಿ ಕೆಲವು ಬೋಗಸ್ ಸೊಸೈಟಿಗಳು ಇವೆ. ಇವುಗಳಿಗೆ ಸೈಟುಗಳು ವಿತರಣೆಯಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಎಲ್ಲರಿಗೂ ಸರಿಯಾಗಿ ಸೈಟುಗಳನ್ನು ನ್ಯಾಯವಾಗಿ ವಿತರಣೆ ಮಾಡುವುದರ ಬಗ್ಗೆ ಪರಿಶೀಲನೆಮಾಡಿ ತಕ್ಕ ಕ್ರಮಗಳನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಡಿ. ಕೆ ನಾಯಕರ್.— ಸೈಟುಗಳನ್ನು ವಿತರಣೆ ಮಾಡಲು ಸಂಬಂಧಪಟ್ಟ ರೂಲ್ಸುಗಳಿವೆ. ಆ ರೂಲ್ಸುಗಳ ಪ್ರಕಾರ ಯಾರ್ಯಾರಿಗೆ ಎಲಿಜಿಬಿಲಿಟಿ ಇದೆ ಅಂತಹವರು ಸೈಟುಗಳಿಗಾಗಿ ಅಪ್ಲೈ ಮಾಡಿದಾಗ ಅವರಿಗೆ ಸೈಟುಗಳನ್ನು ವಿಲೇವಾರಿ ಮಾಡಬೇಕೆಂದು ಇದೆ ಇದನ್ನು ರೂಲು ಪ್ರಕಾರ ಸ್ಕ್ರುಟಿನಿ ಮಾಡಿ ಆನಂತರ ಅಲಾಟು ಮಾಡುತ್ತಾರೆ. ಇದಲ್ಲದೆ ಸೊಸೈಟಿಗಳು ಅವರ ಉದ್ಯೋಗಿಗಳ ಅನುಕೂಲಕ್ಕಾಗಿ ಎಂಪ್ಲಾಯ್ಸ್ ಸೊಸೈಟಿ ಎಂದು ರಿಜಿಸ್ಟರು ಮಾಡಿಸಿಕೊಂಡಿರುತ್ತಾರೆ. ಇದು ಒಳ್ಳೆಯ ಉದ್ದೇಶಕ್ಕಾಗಿ ಎಂದು ತಿಳಿದು ಅಂತಹ ಸೊಸೈಟಿಗಳಿಗೆ ಸೈಟುಗಳನ್ನು ಕೊಡಲಾಗುತ್ತದೆ. ಆದರೆ ಮಾನ್ಯ ಸದಸ್ಯರಂ ಕೆಲವು ಸೊಸೈಟಿಗಳು ಮೂರಾಟ ಮಾಡುತ್ತಿವೆ ಎಂದರು. ಅಂತಹವುಗಳು ಸರಕಾರದ ಗಮನಕ್ಕೆ ಬಂದಿಲ್ಲ. ಮಾನ್ಯ ಸದಸ್ಯರ ಬಳಿ ಇಂತಹ ಸೊಸೈಟಿಗಳ ಬಗ್ಗೆ ಮಾಹಿತಿ ಇದ್ದರೆ ಅದನ್ನು ಸರಕಾರಕ್ಕೆ ಕಳುಹಿಸಿ ಕೊಟ್ಟರೆ ಪರಿಶೀಲನೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಬಹುದು. ಇಂತಹವು ಇದ್ದರೆ ಪರಿಶೀಲನೆ ಮಾಡುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.— ಸರಕಾರ ಸೈಟುಗಳನ್ನು ಅಲಾಟು ಮಾಡುವಾಗ ಯಾವ ಪಾಲಿಸಿ ಇಟು ಕೊಂಡು ಕೊಡುತ್ತೀರಿ? ಎಂದರೆ ಇದರಲ್ಲಿ ಯಾರು ಮೊದಲು ಅರ್ಜಿ ಹಾಕಿರುತ್ತಾರೋ ಅವರನ್ನು ಪ್ರಯಾರಿಟಿ ಮೇಲೆ ಸೈಟುಗಳನ್ನು ಅಲಾಟು ಮಾಡುತ್ತಾರೋ ಇಲ್ಲವೇ ಯಾರ ಶಿಫಾರಸು ಬಂದಿದೆಯೋ ಅವಕ್ಕೆ ಮೊದಲಂ ಕೊಡಬೇಕೆಂದು ಅಲಾಟು ಮಾಡುತ್ತೀರೋ?

ಶ್ರೀ ಡಿ. ಕೆ. ನಾಯಕರ್.— ಇವಕ್ಕೆಲ್ಲಾ ರೂಲ್ಸುಗಳಿವೆ. ಈ ರೂಲ್ಸುಗಳ ಆಧಾರದ ಮೇಲೆ ಸೈಟುಗಳನ್ನು ಅಲಾಟು ಮಾಡಲಾಗುತ್ತದೆ. ಇದರಲ್ಲಿ ಯಾರಾದರೂ ಶಿಫಾರಸು ಮಾಡಿದ್ದರೆ ಇಂತಹ ಅರ್ಜಿಗಳನ್ನೂ ಇದರ ಜೊತೆಗಂಲ್ಲಿ ಪರ್ಯಾಲೋಚನೆಗೆ ತೆಗೆದುಕೊಳ್ಳಬಹುದು. ಇಂತಹವರಿಗೇ ಕೊಡುತ್ತೇವೆಂದು ಸರಕಾರ ಎಲ್ಲೂ ಹೇಳಿಲ್ಲ.

---

† Asterisks Indicates that remarks or speeches have not been revised by the member concerned.

ಶ್ರೀ ಟಿ. ಆರ್. ಶಾಮಣ್ಣ.— ರೆವಿನ್ಯೂ ಸೈಟು ಹೋಲ್ಡರುಗಳಿಗೆ ಅಲಾಟು ಮಾಡಿರುವ ಸೈಟುಗಳು ೧೯೭೦-೭೨ರಲ್ಲಿ ೭, ೧೯೭೩-೭೫ರಲ್ಲಿ ೪, ೧೯೭೬-೭೪ರಲ್ಲಿ ೧೩೮, ಮತ್ತು ೧೯೭೪-೭೫ರಲ್ಲಿ ೧೩೬೭ ಸೈಟುಗಳು ಎಂದು ಹೇಳಲಾಗಿದೆ. ಇದು ಸಂತೋಷದ ವಿಚಾರ ಆದರೆ ಇನ್ನೂ ಕೆಲವರು ರೆವಿನ್ಯೂ ಸೈಟುಗಳನ್ನು ಇಟ್ಟುಕೊಂಡಿದ್ದು ಕಳೆದುಕೊಂಡಿರುವವರಿಗೆ ಸೈಟುಗಳು ಸಿಕ್ಕಿಲ್ಲ. ಇಂತಹವರ ಬಗ್ಗೆ ತೀವ್ರವಾದ ಕಾರ್ಯಕ್ರಮ ಹಾಕಿಕೊಂಡು ಸರಕಾರದವರು ಈ ಸಮಸ್ಯೆಯನ್ನು ಬೇಗನೆ ಬಗೆಹರಿಸಲು ತಕ್ಕ ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಡಿ. ಕೆ. ನಾಯಕರ್.— ಯಾವ ರೆವಿನ್ಯೂ ಸೈಟು ಹೋಲ್ಡರುಗಳಿಗೆ ಇನ್ನೂ ಸೈಟುಗಳು ಸಿಕ್ಕಿಲ್ಲವೊ ಅಂತಹವರ ಬಗ್ಗೆ ಕೂಡ ವಿಚಾರ ಮಾಡಬೇಕೆಂದು ಅಧಿಕಾರಿಗಳಿಗೆ ಡೈರೆಕ್ಷನ್ ಕೊಡಲಾಗಿದೆ.

ಅಧ್ಯಕ್ಷರು.— ಪ್ರಶ್ನೆ ನಂ. ೨೪೬ ನಂತರ ತೆಗೆದುಕೊಳ್ಳುತ್ತೇನೆ.

Exemption of Demand Charges for Irrigation Pumpsets

379. SRI K. H. HANUMEGOWDA (Hassan)—

Will the Chief Minister be pleased to state—

(*a*) whether it is a fact that during the last session of the House, the Minister for Power had assured that the demand charges of Rs. 10 per month fixed per pumpset would be exempted in the interest of the ryots;

(*b*) if so, whether it has come to their notice that Electricity Board has been recovering the demand charges of Rs. 10 per month per set;

(*c*) the definite decision of the Government in this behalf?

SRI H. C SREEKANTAIAH (Minister of State for Electricity).—

(*a*) No. Assurance was given that the matter would be examined.

(*b*) Does not arise.

(*c*) The matter is under examination.

ಶ್ರೀ ಕೆ. ಎಚ್ ಹನುಮೇಗೌಡ.— ಕಳೆದ ಅಧಿವೇಶನದ ಸಮಯದಲ್ಲಿ ಇದರ ಬಗ್ಗೆ ವಿಪುಲವಾದ ಚರ್ಚೆಯಾಯಿತು. ಈ ಡಿಮ್ಯಾಂಡ್ ಚಾರ್ಜನ್ನು ತೆಗೆಯುತ್ತೇವೆಂದು ಹೇಳುವವರೆಗೆ ಡಿಮ್ಯಾಂಡ್ ಪಾಸ್ ಮಾಡಲು ಅವಕಾಶ ಕೊಡುವುದಿಲ್ಲವೆಂದು ನಾವು ಹೇಳಿದಾಗ ಮಾನ್ಯ ಚನ್ನಬಸಪ್ಪನವರು ಆ ಬಗ್ಗೆ ಖಚಿತವಾದ ಆಶ್ವಾಸನೆಯನ್ನು ಕೊಟ್ಟರು, ರೈತರಿಗೆ ತೊಂದರೆಯಾಗುತ್ತಿರುವ ಕಾರಣದಿಂದ ಇದನ್ನು ತೆಗೆದು ಹಾಕುತ್ತೇವೆಂದಂ ಅವರು ಹೇಳಿದ್ದರು, ಆದರೂ ಸಹ ಅದನ್ನು ಕಾರ್ಯಗತ ಮಾಡದಿರಲು ಕಾರಣವೇನು?

† ಶ್ರೀ ಎಚ್. ಸಿ. ಶ್ರೀಕಂಠಯ್ಯ,— ಮಾನ್ಯ ಚನ್ನಬಸಪ್ಪನವರು ಇದನ್ನು ತೆಗೆದುಹಾಕುತ್ತೇವೆಂದು ಕಡ್ಡಾಯವಾಗಿ ಏನೂ ಹೇಳಿಲ್ಲ, ಅದನ್ನು ಪರಿಶೀಲನೆ ಮಾಡುವುದಾಗಿ ಮಾತ್ರ ಹೇಳಿದ್ದಾರೆ. ಇದನ್ನು ತೆಗೆದುಹಾಕಿದರೆ ವಿದ್ಯುಚ್ಛಕ್ತಿ ಮಂಡಲಿಗೆ ೫-೬ ಕೋಟಿ ರೂಪಾಯಿಗಳಷ್ಟು ಲುಕ್ಸಾನಾಗುತ್ತದೆ. ಅದನ್ನು ಯಾವ ರೀತಿ ರೀಇಂಬರ್ಸ್ ಮಾಡಬೇಕೆಂಬುದನ್ನು ವಿಚಾರ ಮಾಡಬೇಕಾಗಿದೆ. ಆದಕಾರಣ ಅವರು ಇದನ್ನೂ ಪುನರ್‌ಪರಿಶೀಲನೆ ಮಾಡುವುದಾಗಿ ಹೇಳಿದ್ದಾರೆಯೇ ಹೊರತು ತೆಗೆದುಹಾಕುತ್ತೇವೆಂದು ಕಡ್ಡಾಯವಾಗಿ ಆಶ್ವಾಸನೆಯನ್ನು ಕೊಟ್ಟಿಲ್ಲ,

ಶ್ರೀ ಕೆ. ಎಚ್. ಹನುಮೇಗೌಡ.— ಅವರು ಅಂದು ಅದನ್ನು ತೆಗೆದುಹಾಕುತ್ತೇವೆಂದು ಹೇಳಿದ್ದರಿಂದ ನಾವೂ ಸಹ ಒಪ್ಪಿಕೊಂಡಿದ್ದೆವು ಅದು ಸಾಧ್ಯವಿಲ್ಲದಿದ್ದರೆ ಅಂದೇ ಅದು ಸಾಧ್ಯವಾಗುವುದಿಲ್ಲವೆಂದು ಹೇಳಬಹುದಾಗಿತ್ತು, ಆ ರೀತಿ ಮಾಡದೆ ಇನ್ನೂ ಪರಿಶೀಲನೆ ಮಾಡುವುದಾಗಿ ಹೇಳುತ್ತಿದ್ದೀರಿ, ಪರಿಶೀಲನೆ ಮಾಡಲು ಇನ್ನೂ ಎಷ್ಟು ಕಾಲ ಬೇಕಾಗುತ್ತದೆ?